**ಕರ್ನಾಟಕ ಸರ್ಕಾರ**

ಸಂಖ್ಯೆ: ಕಾಶಿಇ/133/ಪಿಂಚಣಿ/ಸಿಆರ್1/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:21.10.2020
29

**ಸುತ್ತೋಲೆ**

ವಿಷಯ: ಯು.ಜಿ.ಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಗ್ರೂಪ್ "ಎ" ಮತ್ತು "ಬಿ" ವೃಂದದ ಸಹಾಯಕ/ಸಹ ಪ್ರಾಧ್ಯಾಪಕರುಗಳಗೆ ಸಾಮೂಹಿಕ ವಿಮಾ ಕಂತನ್ನು ಕಟಾಯಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ:ಇಡಿ 126 ಡಿಸಿಇ 2018 ದಿನಾಂಕ:14-12-2018
2) ಸರ್ಕಾರದ ಅದಿಸೂಚನೆ ಸಂಖ್ಯೆ;ಆಇ 12 ಸಾವಿಯೋ 2018 ದಿನಾಂಕ:16-11-2018

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ರೂ.7000/-ಮತ್ತು ರೂ.7000/-ಕ್ಕೆ ಮೆಲ್ಪಟ್ಟು ಎ.ಜಿ.ಪಿ ಪಡೆಯುತ್ತಿರುವ ಸಹಾಯಕ/ಸಹ ಪ್ರಾಧ್ಯಾಪಕರಿಗೆ ಸಾಮೂಹಿಕ ವಿಮಾ ವಂತಿಕೆಯನ್ನು ರೂ.180/-ರಿಂದ 240/-ಕ್ಕೆ ಹೆಚ್ಚಿಸಿ ಸುತ್ತೋಲೆಯನ್ನು ಹೊರಡಿಸಲು ಅನುಮತಿಸಲಾಗಿದ್ದು, ಅದರನ್ವಯ ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/133/ಸಿಆರ್2/ಪಿಂಚಣಿ/2011-12ರ ದಿನಾಂಕ:31-12-2018ರಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಲಾಗಿತ್ತು,

1) ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ರೂ.7000/- ಮತ್ತು ರೂ.7000/-ಕ್ಕೆ ಮೆಲ್ಪಟ್ಟು ಎ.ಜಿ.ಪಿ ಪಡೆಯುತ್ತಿರುವ ಸಹಾಯಕ/ಸಹ ಪ್ರಾಧ್ಯಾಪಕರಿಗೆ ಸಾಮೂಹಿಕ ವಿಮಾ ವಂತಿಕೆಯನ್ನು ರೂ.180/-ರಿಂದ 240/-ಕ್ಕೆ ಹೆಚ್ಚಿಸಿ ಕಟಾವಣಿ ಮಾಡಲು ಸೂಚಿಸಲಾಗಿತ್ತು,
2) ಈಗಾಗಲೇ ವಯೋನಿವೃತ್ತಿ ಹೊಂದಿರುವ ರೂ.7000/-ಮತ್ತು ರೂ.7000/-ಕ್ಕೆ ಮೆಲ್ಪಟ್ಟು ಎ.ಜಿ.ಪಿ ಪಡೆಯುತ್ತಿರುವ ಸಹಾಯಕ/ಸಹ ಪ್ರಾಧ್ಯಾಪಕರು/ಪ್ರಾಂಶುಪಾಲರು/ಪ್ರಭಾರ ಪ್ರಾಂಶುಪಾಲರಿಗೆ ಸಾಮೂಹಿಕ ವಿಮೆ (ಜಿ.ಐ.ಎಸ್) ವಂತಿಗೆಯನ್ನು ಮಾಹೆಯಾನ ರೂ.180/-ರಿಂದ 240/-ಕ್ಕೆ ಹೆಚ್ಚಿಸಿ ಕಟಾಯಿಸಿದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ಪ್ರಾಂಶುಪಾಲರ ಹಂತದಲ್ಲಿಯೇ ಮಂಜೂರು ಮಾಡಲು ಸೂಚಿಸಲಾಗಿತ್ತು,

ಉಲ್ಲೇಖ(2)ರ ಸರ್ಕಾರದ ಅದಿಸೂಚನೆಯಲ್ಲಿ ದಿನಾಂಕ:01-01-2019ರಿಂದ ಜಾರಿಗೆ ಬರುವಂತೆ ಸಾಮೂಹಿಕ ವಿಮಾ ಮೊತ್ತವನ್ನು ಈ ಕೆಳಕಂಡತೆ ಪರಿಷ್ಕರಿಸಲಾಗಿದೆ,

| ಕ್ರಮ ಸಂಖ್ಯೆ | ಪ್ರವರ್ಗ | ದಿನಾಂಕ:31-12-2018ರಲ್ಲಿ ಜಾರಿಯಲ್ಲಿದ್ದ ಸಾಮೂಹಿಕ ವಿಮಾ ಮೊತ್ತ | ದಿನಾಂಕ:01-01-2019ರಿಂದ ಪರಿಷ್ಕರಿಸಲಾಗಿರುವ ಸಾಮೂಹಿಕ ವಿಮಾ ಮೊತ್ತ |
|---|---|---|---|
| 1 | ಗ್ರೂಪ್ "ಎ" | 240=00 | 480=00 |
| 2 | ಗ್ರೂಪ್ "ಬಿ" | 180=00 | 360=00 |
| 3 | ಗ್ರೂಪ್ "ಸಿ" | 120=00 | 240=00 |
| 4 | ಗ್ರೂಪ್ "ಡಿ" | 60=00 | 120=00 |

ಅದರೆ ಬಹುತೇಕ ಕಛೇರಿ/ಕಾಲೇಜುಗಳಲ್ಲಿ ದಿನಾಂಕ:01-01-2019ರಿಂದ ಅನ್ವಯವಾಗುವಂತೆ ಪರಿಷ್ಕೃತ ದರದಲ್ಲಿ ಸಾಮೂಹಿಕ ವಿಮಾ ಮೊತ್ತವನ್ನು ಕಟಾಯಿಸದೇ ಇರುವುದು ಹಾಗೂ ಪರಿಷ್ಕೃತ ದರದಲ್ಲಿ ಸಾಮೂಹಿಕ ವಿಮಾ ಮೊತ್ತ ಕಟಾಯಿಸದೇ ಇದ್ದರೂ ಸಹ ನಿವೃತ್ತ/ನಿಧನ ಹೊಂದಿದ ಬೋದಕ/ಬೋಬಕೇತರ ಸಿಬ್ಬಂದಿಗಳಿಗೆ ಪರಿಷ್ಕೃತ ದರದಲ್ಲಿ ಕೆ2 ಮುಖಾಂತರ ವಿಮಾ/ಉಳಿತಾಯ ಮೊತ್ತವನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ,

ಅದುದರಿಂದ ಕೂಡಲೇ ಸೇವಾ ನಿರತರ ಪ್ರಕರಣಗಳಲ್ಲಿ ಉಲ್ಲೇಖ(2)ರ ಸರ್ಕಾರಿ ಅದಿಸೂಚನೆಯನ್ವಯ ಪರಿಷ್ಕೃತ ದರದನ್ವಯ ಕಟಾವಿಗೆ ಕ್ರಮ ಕೈಗೊಂಡು ದಿನಾಂಕ:01-01-2019ರಿಂದ ಬಾಕಿ ಇರುವ ಸಾಮೂಹಿಕ ವಿಮಾ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡಿ ಈ ಕೆಳಕಂಡತೆ ಕೆ2 ಮುಖಾಂತರ ಸರ್ಕಾರಕ್ಕೆ ಜಮೆ ಮಾಡುವುದು

| ಕ್ರಮ ಸಂಖ್ಯೆ | ಕಟಾಯಿಸಬೇಕಾಗಿರುವ ವ್ಯತ್ಯಾಸದ ಬಾಕಿ ಮೊತ್ತ | ವಿಮಾ ನಿಧಿ ವ್ಯತ್ಯಾಸದ ಮೊತ್ತ | ಉಳಿತಾಯ ನಿಧಿ ವ್ಯತ್ಯಾಸದ ಮೊತ್ತ | ಪಾವತಿಸಬೇಕಾಗಿರುವ ಲೆಕ್ಕ ಶೀರ್ಷಿಕೆ |
|---|---|---|---|---|
| 1 | ರೂ.180=00 | 123=00 | 57=00 | ವಿಮಾ ನಿಧಿ:8011-00-101-0-01(ಸ್ವೀಕೃತಿ ಮತ್ತು ಪಾವತಿ) ಉಳಿತಾಯ ನಿಧಿ;8011-00-107-0-02(ಸ್ವೀಕೃತಿ ಮತ್ತು ಪಾವತಿ) |
| 2 | ರೂ.240=00 | 164=00 | 76=00 | |

ದಿನಾಂಕ:01-01-2019ರ ನಂತರ ನಿವೃತ್ತಿ ಹೊಂದಲಾದ ಸಿಬ್ಬಂದಿ ವರ್ಗದವರಿಂದ ವ್ಯತ್ಯಾಸದ ಮೊತ್ತವನ್ನು ಕಟಾಯಿಸಿ ಹಾಗೂ ದಿನಾಂಕ:01-01-2019ರ ನಂತರ ನಿಧನರಾದ ಸಿಬ್ಬಂದಿ ವರ್ಗದವರ ವಾರಸುದಾರರಿಂದ ವ್ಯತ್ಯಾಸದ ಮೊತ್ತವನ್ನು ಪಡೆದು ಮೇಲ್ಕಂಡ ಕಂಡಿಕೆಯಲ್ಲಿ ವಿವರಿಸಿರುವಂತೆ ಸರ್ಕಾರಕ್ಕೆ ಪಾವತಿಗೆ ಕ್ರಮ ವಹಿಸುವಂತೆ ಸೂಚಿಸಲಾಗಿದೆ,

ತಮ್ಮ ವಿಶ್ವಾಸಿ,

**ಅಡಕ-ಉಲ್ಲೇಖಿತ ಪ್ರತಿಗಳು**

**ಕಾಲೇಜು ಶಿಕ್ಷಣ ನಿರ್ದೇಶಕರು.**

**ಪ್ರತಿ ರವಾನೆ:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ -ಮಾಹಿತಿ ಹಾಗೂ ಆಗತ್ಯಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಬಿ.ಎಡ್.ಕಾಲೇಜು/ಚಿತ್ರಕಲಾ ಕಾಲೇಜು /ಕಾನೂನು ಕಾಲೇಜು- ಮಾಹಿತಿ ಹಾಗೂ ಆಗತ್ಯಕ್ರಮಕ್ಕಾಗಿ
3. ಮ್ಯಾನೇಜರ್/ಅಧೀಕ್ಷಕರು ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ ಬೆಂಗಳೂರು- ಮಾಹಿತಿ ಹಾಗೂ ಆಗತ್ಯಕ್ರಮಕ್ಕಾಗಿ
4. ಮ್ಯಾನೇಜರ್/ಅಧೀಕ್ಷಕರು ಹಣ ಮತ್ತು ಪಾವತಿ ವಿಭಾಗ ಕೇಂದ್ರ ಕಛೇರಿ ಬೆಂಗಳೂರು- ಮಾಹಿತಿ ಹಾಗೂ ಆಗತ್ಯಕ್ರಮಕ್ಕಾಗಿ
5. ಕಛೇರಿ ಪ್ರತಿ.

02/11/2018